**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 252/2018

ಪಿಡಬ್ಲು :4 ಸಿಡಬ್ಲು : 10

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ವಿರುಪಾಕ್ಷಿ ಕುಂಬಾರ |
| ತಂದೆಯ ಹೆಸರು | : ಶ್ರೀ. ರಾಮು ಕುಂಬಾರ |
| ವಯಸ್ಸು | : 49 ವರ್ಷ |
| ಉದ್ಯೋಗ | : ಬಿ.ಅರ್.ಡಿ.ಎಸ್. ಟಿವಿ ಕೇಬಲ ಆಪರೇಟರ್ |
| ವಾಸ್ತವ್ಯ | : ಉಗಾರ ಬಿ.ಕೆ, ತಾಲೂಕುಃ ಕಾಗವಾಡ |
| ದಿನಾಂಕ | : 14-11-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು 15 ವರ್ಷಗಳಿಂದ ಉಗಾರ ಬಿ.ಕೆ. ಗ್ರಾಮದಲ್ಲಿ ಕೇಬಲ್ ಆಪರೇಟರ ಆಗಿ ಕೆಲಸ ಮಾಡುತ್ತಿದ್ದೇನೆ. ಚಾಸಾಃ 1 ಸಂಗಪ್ಪ ಕಾಂಬಳೆ ನನಗೆ ಗೊತ್ತಿರುತ್ತಾರೆ. ಅವರು ಬಿ.ಆರ್.ಡಿ.ಎಸ್. ಟಿವಿ ಕೇಬಲ್ ನ ಕುಸುನಾಳ ಗ್ರಾಮದಲ್ಲಿ ಉಸ್ತುವಾರಿ ಮಾಡುತ್ತಾರೆ. ಚಾಸಾಃ 6 ನಿತಿನ ಕಾಂಬಳೆ ಮತ್ತು ಚಾಸಾಃ 7 ಸುರೇಶ ಡಾಕಾನಾಯಕ ಅವರು ಇಂಗಳಿ ಗ್ರಾಮದ ಕೇಬಲ್ ಆಪರೇಟರ್ ಆಗಿರುತ್ತಾರೆ. ಚಾಸಾಃ 8 ಸಂತೋಷ ಅವರು ಮೊಳವಾಡದಲ್ಲಿ ಕೇಬಲ್ ಆಪರೇಟರ್ ಆಗಿರುತ್ತಾರೆ. ಚಾಸಾಃ 9 ವಿನೋದ ಅವರು ಘಟನೆಯ ನಂತರ ಪರಿಚಯವಾಗಿರುತ್ತಾರೆ. ಘಟನೆಯ ನಂತರ 1 ರಿಂದ 5 ನೇ ಆರೋಪಿತರು ಪರಿಚಯ ಆಗಿರುತ್ತಾರೆ. 6 ನೇ ಆರೋಪಿಯು ಮೊದಲಿನಿಂದಲೂ ಪರಿಚಯವಿರುತ್ತಾರೆ. ಅವರೂ ಸಹ ಕೇಬಲ್ ನೆಟ್‌ವರ್ಕ ಕೆಲಸ ಮಾಡುತ್ತಾರೆ.

2. ದಿನಾಂಕಃ 15-09-2018 ರಂದು ರಾತ್ರಿ 11:00 ಗಂಟೆ ಸಮಯದಲ್ಲಿ ಕೇಬಲ್ ನೆಟವರ್ಕನ ಸಿಗ್ನಲ್ ಆಫ್ ಆಗಿತ್ತು. ಆ ಬಗ್ಗೆ ನಮ್ಮ ಮನೆಯಲ್ಲಿರುವ ಮಶಿನಲ್ಲಿ ನನಗೆ ಮೆಸೇಜ ಬಂದಿತ್ತು. ಏನಾಗಿದೆ ಎಂದು ನೋಡಲು, ವೈಯರ್ ಎಲ್ಲಿಯಾದರು ತುಂಡಾಗಿದೆ ಎಂದು ನೋಡಲು ನಮ್ಮ ಮನೆಯಿಂದ ನೋಡಿಕೊಂಡು ಹೋಗುತ್ತಿದ್ದೇನು. ಚಾಸಾಃ 1 ಸಂಗಪ್ಪ ಅವರು ನನಗೆ ಪೋನ ಮಾಡಿ ಕೇಬಲ ನೆಟ್‌ವರ್ಕ ಇಲ್ಲದಿರುವ ಬಗ್ಗೆ ನನಗೆ ವಿಚಾರಿಸಿದರು. ಕೇಬಲ ವಾಯರ್ ತುಂಡಾಗಿರುವ ಬಗ್ಗೆ ಹುಡಿಕಿಕೊಂಡು ಹೋಗುತ್ತಿದ್ದೇನೆ ಎಂದು ಚಾಸಾಃ 1 ಸಂಗಪ್ಪ ಅವರಿಗೆ ಹೇಳಿದೆನು. ನಾನು ಆ ರೀತಿ ಹುಡುಕಿಕೊಂಡು ರತ್ನ ಗಾರ್ಡನ್ ದಾಟಿ ಉಗಾರ ಕೆ.ಹೆಚ್. ನ ಬ್ರಿಜ್ಜ ಬಳಿ ಮೋಟರ ಬೈಕ್ ಮೇಲೆ ಒಬ್ಬರು ಕುಳಿತಿದ್ದರು, ಇನ್ನೊಬ್ಬರು ಕಂಬದ ಬಳಿ ನಿಂತಿದ್ದರು, ಇನ್ನೊಬ್ಬರು ಕಂಬದ ಮೇಲೆ ಹತ್ತಿ ವಾಯರ್ ಕಟ್ ಮಾಡುತ್ತಿದ್ದರು, ನಾನು ಅಲ್ಲಿಗೆ ಹೋಗಿ ಏನು ಮಾಡುತ್ತಿದ್ದೀರಿ ಎಂದು ವಿಚಾರಿಸಿದ್ದೇನು. ಕಂಬದ ಮೇಲಿದ್ದವ ವ್ಯಕ್ತಿ ಕೆಳಗೆ ಇಳಿದನು. ಅವರು ನನ್ನನ್ನು ತಳ್ಳಿ 3 ಜನರು ಮೋಟರ ಬೈಕ ಮೇಲೆ ಹೋದರು. ನಾನು ನನ್ನ ಮೋಟರ್ ಸೈಕಲ ತೆಗೆದುಕೊಂಡು ಅವರನ್ನು ಬೆನ್ನು ಹತ್ತಿದೆನು. 3 ಜನರು ವೇಗವಾಗಿ ಹೊರಟು ಹೋದರು. ನಾನು ಚಾಸಾಃ 1 ಸಂಗಪ್ಪ ಅವರಿಗೆ ಪೋನ ಮಾಡಿ ವಿಚಾರ ತಿಳಿಸಿ ಆ 3 ಜನರು ಮೋಟರ ಸೈಕಲನಲ್ಲಿ ನಿಮ್ಮ ಊರಿನ ಕಡೆಗೆ ಬರುತ್ತಿದ್ದಾರೆ ಎಂದು ಹೇಳಿದೆನು. ನಾನು ನೋಡಿದ ಮೋಟರ ಸೈಕಲ ನಂ. ಕೆ.ಎ. 23/ಇಜಿ-3097 ಆಗಿತ್ತು. ಅದನ್ನು ನೋಡಿದರೆ ನಾನು ಈಗ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ದ್ವಿಚಕ್ರ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಮು.ಮಾಃ 2 ಎಂದು ಗುರುತಿಸಲಾಗಿದೆ.

3. ಘಟನೆಯ ಸಮಯದಲ್ಲಿ ಕತ್ತಲು ಆಗಿದ್ದರಿಂದ 3 ಜನ ಆರೋಪಿತರನ್ನು ಸರಿಯಾಗಿ ಗುರುತಿಸಲಾಗಿರುವುದಿಲ್ಲ. ಚಾಸಾಃ 1 ಸಂಗಪ್ಪ ಅವರು 3 ಜನ ಆರೋಪಿತರನ್ನು ಹಿಡಿದುಕೊಂಡ ನಂತರ ನಾನು ಆ ಸಮಯದಲ್ಲಿ ನೋಡಿರುತ್ತೇನೆ. ಈಗ ಬಹಳ ವರ್ಷಗಳು ಆಗಿದ್ದರಿಂದ ಆರೋಪಿತರನ್ನು ಗುರುತಿಸಲು ಆಗುವುದಿಲ್ಲ, ಅವರ ಹೆಸರು ಸಂದೀಪ, ಜ್ಞಾನೇಶ ಮತ್ತು ಇನ್ನೊಬ್ಬರ ಹೆಸರು ನೆನಪು ಆಗುತ್ತಿಲ್ಲ.

4. ಘಟನೆಯ ಬಗ್ಗೆ ಚಾಸಾಃ 1 ಸಂಗಪ್ಪ ಅವರು ಪೋಲಿಸರಿಗೆ ದೂರು ಕೊಟ್ಟಿದ್ದಾರೆ. ಆ ನಂತರ ಪೋಲಿಸರು ನನ್ನನ್ನು ವಿಚಾರಿಸಿದ್ದಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎ.ಸಿ.ಪಿ ವಕೀಲರಿಂದ**

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.